ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ

ಸ್ವಚ್ಛ ಸಂಕೀರ್ಣ · ಜಲೋತ್ಸವ · Har Ghar Jal Jal Jeevan Mission

## ನಮ್ಮ ನಡಿಗೆ – ತ್ಯಾಜ್ಯ ಮುಕ್ತ ಕಡೆಗೆ

ಗ್ರಾಮೀಣ ಕರ್ನಾಟಕವನ್ನು ತ್ಯಾಜ್ಯ ಮುಕ್ತವಾಗಿಸಲು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು, ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯಡಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುತ್ತಿದೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವ ಇಲಾಖೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಹಂತದಲ್ಲಿ ಸ್ವಚ್ಛ ಸಂಕೀರ್ಣ (ಘನ ತ್ಯಾಜ್ಯ ವಿಲೇವಾರಿ ಘಟಕ)ಗಳನ್ನು ನಿರ್ಮಿಸುವ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಎಲ್ಲಾ ಮನೆ ಹಾಗೂ ಅಂಗಡಿ ಮುಂಗಟ್ಟುಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿದೆ. ಇದೀಗ ಒಂದು ಹೆಜ್ಜೆ ಮುಂದಿಟ್ಟಿರುವ ಇಲಾಖೆ ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶೇಷ ಆಂದೋಲನವನ್ನು ಹಮ್ಮಿಕೊಂಡಿದೆ. **ಚಿತ್ರದುರ್ಗ, ದಾವಣಗೆರೆ, ಹಾವೇರಿ, ಧಾರವಾಡ, ಗದಗ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಬಳ್ಳಾರಿ, ಬೀದರ್, ಕೊಪ್ಪಳ, ರಾಯಚೂರು, ಕಲ್ಬುರ್ಗಿ, ಮತ್ತು ಯಾದಗಿರಿ** ಜಿಲ್ಲೆಗಳಲ್ಲಿ 30ನೇ ಜನವರಿಯಿಂದ 31ನೇ ಮಾರ್ಚ್ ವರೆಗೆ ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ ಮಾಡುವ ವಿಶೇಷ ಆಂದೋಲನವನ್ನು ಈ ಮೇಲಿನ ಜಿಲ್ಲೆಗಳಲ್ಲಿ ಆಯೋಜಿಸಲಾಗಿದೆ.







ಮುಂದುವರೆದು ಇನ್ನುಳಿದ 16 ಜಿಲ್ಲೆಗಳಲ್ಲಿ 16ನೇ ಜನವರಿಯಿಂದ 15ನೇ ಫೆಬ್ರವರಿಯವರೆಗೆ **ನಮ್ಮ ನಡಿಗೆ ತ್ಯಾಜ್ಯ ಮುಕ್ತ ಕಡೆಗೆ** ಎಂಬ ವಿಶೇಷ ಆಂದೋಲನವನ್ನು ಆಯೋಜಿಸಲಾಗಿದ್ದು, ರಾಜ್ಯಾದ್ಯಂತ ಈ ಆಂದೋಲನದ ಅಂಗವಾಗಿ ಗ್ರಾಮ/ವಾರ್ಡ್ ತಂಡಗಳ ರಚನೆ, ಶ್ರಮದಾನ ಸೇರಿದಂತೆ ಜಾಗೃತಿ ಮೂಡಿಸುವ ಹಾಗೂ ಈ ಆಂದೋಲನದ ಯಶಸ್ಸಿಗೆ ಕಾರಣೀಬೂತರಾದವರಿಗೆ ಗೌರವ ಸಲ್ಲಿಸುವುದು ಸೇರಿದಂತೆ ಹತ್ತು ಹಲವು ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.

## ತರಬೇತಿ ಕಾರ್ಯಕ್ರಮಗಳು

### SBM-G & JJM ಯೋಜನೆಗಳ ಅನುಷ್ಠಾನ ಕುರಿತು ಕಾರ್ಯಾಗಾರ

**ಸ್ವಚ್ಛ ಭಾರತ್ ಮಿಷನ್ (ಗ್ರಾ)** ಹಾಗೂ **ಜಲ ಜೀವನ್ ಮಿಷನ್** ಯೋಜನೆಗಳ ಅನುಷ್ಠಾನ ಕುರಿತು ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯನಿರ್ವಾಹಕ ಅಭಿಯಂತರರು ಹಾಗೂ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ಎಲ್ಲಾ ಜಿಲ್ಲೆಗಳ ನೋಡಲ್ ಅಧಿಕಾರಿಗಳಿಗೆ ದಿನಾಂಕ: 8 ಮತ್ತು 9ನೇ ಜನವರಿಯಂದು ಆಯೋಜಿಸಲಾಗಿದ್ದ 2 ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ **ಶ್ರೀ. ಕೆ.ಎಸ್ ಈಶ್ವರಪ್ಪ** ಉದ್ಘಾಟಿಸಿದರು. ಕಾರ್ಯಾಗಾರದಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು ಹಾಗೂ ಮುಖ್ಯ ಅಭಿಯಂತರರು ಸೇರಿದಂತೆ ಇತರೇ ಅಧಿಕಾರಿಗಳು ಹಾಜರಿದ್ದರು.





### JJM IMIS Application ಬಳಕೆ ಕುರಿತು 2 ದಿನಗಳ ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರ





ಗ್ರಾಮೀಣ ಭಾರತದ ಎಲ್ಲಾ ಮನೆಗಳಿಗೆ 2024 ರೊಳಗಾಗಿ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಮೂಲಕ ಶುದ್ಧ, ಸುರಕ್ಷಿತ ನೀರನ್ನು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ರಾಜ್ಯದಲ್ಲಾಗಿರುವ ಪ್ರಗತಿಯನ್ನು ನಿಗದಿತ ನಮೂನೆಯಾದ **JJM**ನ **IMIS**ನಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ **IMIS** ಸಮಾಲೋಚಕರುಗಳಿಗೆ 5 ಮತ್ತು 6ನೇ ಜನವರಿಯಂದು ರಾಜ್ಯ ಮಟ್ಟದ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅಭಿಯಂತರರು, ಗ್ರಾ.ಕು.ನೀ & ನೈ ಇಲಾಖೆ ಇವರ ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಎಲ್ಲಾ 30 ಜಿಲ್ಲೆಗಳ **IMIS** ಸಮಾಲೋಚಕರು ಪಾಲ್ಗೊಂಡಿದ್ದರು. ಮುಖ್ಯ ಅಭಿಯಂತರರು, ನಿರ್ದೇಶಕರು**(ISA)**, ರಾಜ್ಯ **IMIS** ಸಮಾಲೋಚಕರು, ಯುನಿಸೆಫ್ ರಾಜ್ಯ ಸಂಯೋಜಕರು, **HRD** ರಾಜ್ಯ ಸಮಾಲೋಚಕರು, ದಾಖಲಾತಿ ತಜ್ಞರು ಹಾಗೂ ಸಂಪನ್ಮೂಲ ವ್ಯಕ್ತಿಗಳು ಜಿಲ್ಲಾ **IMIS** ಸಮಾಲೋಚಕರುಗಳಿಗೆ ತರಬೇತಿ ನೀಡಿದರು.



### ಭೂವಿಜ್ಞಾನಿಗಳಿಗೆ ತರಬೇತಿ

**ಜಲ ಜೀವನ್ ಮಿಷನ್** ಮಾರ್ಗಸೂಚಿ, ಭೂಭೌತಿಕ ಸಮೀಕ್ಷೆಯ ಉಪಕರಣಗಳ ಬಳಕೆ, ಕೊಳವೆ ಬಾವಿಗಳ ಜಲ ಬಿಂದುಗಳನ್ನು ಗುರುತಿಸುವ ಉಪಕರಣಗಳ ಬಳಕೆ ಹಾಗೂ ಭೂಗರ್ಭಶಾಸ್ತ್ರಕ್ಕೆ ಸಂಬಂದಿಸಿದ ವಿಷಯಗಳ ಕುರಿತು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂವಿಜ್ಞಾನಿಗಳಿಗೆ 18 ಮತ್ತು 19ನೇ ಜನವರಿಗಳಂದು ಎರಡು ದಿನಗಳ ಕಾಲ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಮುಖ್ಯ ಅಭಿಯಂತರರು, ಗ್ರಾ.ಕು.ನೀ & ನೈ ಇಲಾಖೆ ಹಾಗೂ ನಿರ್ದೇಶಕರು**(ISA)**, ಇವರ ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಎಲ್ಲಾ ಜಿಲ್ಲೆಗಳ ಭೂವಿಜ್ಞಾನಿಗಳು ಭಾಗಿಯಾಗಿದ್ದರು. ಇವರಿಗೆ ನಿರ್ದೇಶಕರು**(ISA)**, ಯುನಿಸೆಫ್ ರಾಜ್ಯ ಸಂಯೋಜಕರು, **HRD** ರಾಜ್ಯ ಸಮಾಲೋಚಕರು, **PMU**ವಿನ ತಂಡದ ನಾಯಕರು, **AEE** ಗ್ರಾ.ಕು.ನೀ & ನೈ ಇಲಾಖೆ, **WQMSP State Technical Coordinator,** ಹಿರಿಯ ಭೂವಿಜ್ಞಾನಿ ಮತ್ತು ಸಂಪನ್ಮೂಲ ವ್ಯಕ್ತಿಗಳಾದ ದೇವರಾಜರೆಡ್ಡಿ ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂವಿಜ್ಞಾನಿಗಳಿಗೆ ತರಬೇತಿ ನೀಡಿದರು.







### GEM ತಂತ್ರಾಂಶ ಅಳವಡಿಕೆ ಕುರಿತ ತರಬೇತಿ ಕಾರ್ಯಾಗಾರ

**GEM** ತಂತ್ರಾಂಶ ಅಳವಡಿಕೆ ಕುರಿತು 20, 21 ಮತ್ತು 22 ನೇ ಜನವರಿಗಳಂದು ರಾಜ್ಯ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಭಿಯಂತರರು ಹಾಗೂ **PMU** ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಸೇರಿದಂತೆ ರಾಜ್ಯದ ಎಲ್ಲಾ ವಿಭಾಗಗಳಿಂದ ಬಂದಂತಹ ಅಭಿಯಂತರರುಗಳಿಗೆ 3 ದಿನಗಳ ಕಾಲ **GEM** ತಂತ್ರಾಂಶ ಅಳವಡಿಕೆ ಕುರಿತು ತರಬೇತಿ ನೀಡಲಾಯಿತು. ಮುಖ್ಯ ಅಭಿಯಂತರರು, ಗ್ರಾ.ಕು.ನೀ & ನೈ ಇಲಾಖೆ ಇವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ **M/s Capricot Technologies PVT. LTD. Bangalore** ಇವರು ಇಲಾಖೆಯ ಅಭಿಯಂತರರುಗಳಿಗೆ **GEM** ತಂತ್ರಾಂಶ ಅಳವಡಿಕೆ ಕುರಿತು ತರಬೇತಿ ನೀಡಿದರು.







### ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯತ್ತ ಧಾರ್ಮಿಕ ದತ್ತಿ ಇಲಾಖೆ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಗೆ ಒಳಪಡುವ ಆಯ್ದ ದೇವಾಲಯಗಳಲ್ಲಿ ಸಮರ್ಪಕ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಮಾಡುವ ಕುರಿತು ದಿನಾಂಕ 20 ಮತ್ತು 21ನೇ ಜನವರಿಗಳಂದು ಎರಡು ದಿನಗಳ ಕಾಲ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮಕ್ಕೆ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಯ ಆಯುಕ್ತರು, ಉಪ ಆಯುಕ್ತರು ಹಾಗೂ ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯ ಉಪ ನಿರ್ದೇಶಕರ ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಆಯ್ದ ದೇವಾಲಯಗಳು ಒಳಪಡುವ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಯ ಇತರೆ ಅಧಿಕಾರಿಗಳು ಹಾಜರಿದ್ದರು.





ಇದಿಷ್ಟೇ ಅಲ್ಲದೆ ಇಲಾಖೆಯಡಿ ಸ್ಥಾಪಿಸಲಾಗಿರುವ **ಪರಿಹಾರ ಸಹಾಯವಾಣಿ** ಮುಖಾಂತರ ರಾಜ್ಯದ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಮತ್ತು ಶೌಚಾಲಯ ನಿರ್ಮಾಣ ಮಾಡುವ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಿಗೆ ಪ್ರಾತ್ಯಕ್ಷತೆಯಲ್ಲಿ ಪ್ರಸ್ತುತ ಪಡಿಸಲಾಯಿತು.